ದಿನಾಂಕಃ26.11.2025 ಸಾಕ್ಷಿಯನ್ನು ಕರೆಯಿಸಿ ಪ್ರಮಾಣ ವಚನ ಭೋದಿಸಲಾಯಿತು.

ಪಾಟೀ ಸವಾಲು ಃ 2 ನೇ ಎದುರುದಾರರ ಪರಃ ಶ್ರೀಮತಿ ಹೆಚ್ ಎಮ್ ವಕೀಲರಿಂದಃ

ಅಪಘಾತ ಕಾಲದಲ್ಲಿ ಪ್ರೀತಮ್ 6 ನೇ ತರಗತಿ ಓದುತ್ತಿದ್ದ. ಪ್ರಸ್ತುತ ಪ್ರೀತಮ್ 10 ನೇ ತರಗತಿಯಲ್ಲಿ ವಿದ್ಯಾಭ್ಯಾಸ ಮಾಡುತ್ತಿದ್ದಾನೆ. ಪ್ರೀತಮ್ 7 ನೇ ತರಗತಿಯಲ್ಲಿ ಒಂದು ಬಾರಿ ಅನುತ್ತೀರ್ಣನಾಗಿದ್ದನು. ಆತ ಟೆಸ್ಟ್ ನಲ್ಲಿ ಅನುತ್ತೀರ್ಣನಾಗಿದ್ದನು. ಅಪಘಾತದ ನಂತರ ಪ್ರೀತಮ್ ಯಾವುದೇ ತರಗತಿಯಲ್ಲಿ ಅನುತ್ತೀರ್ಣಗೊಳ್ಳದೆ ವಿದ್ಯಾಭ್ಯಾಸ ಮುಂದುವರಿಸುತ್ತಿದ್ದಾನೆ ಎಂದರೆ ಸರಿ. ನನ್ನ ಮಗ ಶಾಲೆಯಲ್ಲಿ ಸರಿಯಾಗಿ ವಿದ್ಯಾಭ್ಯಾಸ ಮಾಡುತ್ತಿಲ್ಲ ಎಂದು ನೋಟೀಸನ್ನು ಶಾಲೆಯವರು ಕೊಟ್ಟಿದ್ದಾರೆ. ಹಾರಾಡಿ ಶಾಲೆಯವರು ಆ ರೀತಿಯ ನೋಟೀಸ್ ಕೊಟ್ಟಿದ್ದಾರೆ. ಆ ದಾಖಲೆಗಳನ್ನು ನ್ಯಾಯಾಲಯಕ್ಕೆ ಹಾಜರುಪಡಿಸಬಹುದು. ಪ್ರೀತಮ್ ಮಲಗಿದ್ದಲ್ಲಿಯೇ ಇರಬೇಕು, ಓಡಾಡಬಾರದು ಎಂದು ವೈದ್ಯರು ಸರ್ಟಿಫಿಕೇಟ್ ನೀಡಿಲ್ಲ.

2. ಅಪಘಾತ ಆದ ತಕ್ಷಣ ಪ್ರೀತಮ್ ನನ್ನು ಸರ್ಕಾರೀ ಆಸ್ಪತ್ರೆ ಪುತ್ತೂರಿಗೆ ಚಿಕಿತ್ಸೆಗಾಗಿ ಕರೆದುಕೊಂಡು ಬರಲಾಯಿತು. ಅಲ್ಲಿ ಆತನಿಗೆ ಪ್ರಥಮ ಚಿಕಿತ್ಸೆಯನ್ನು ಕೊಡಲಾಗಿದೆ. ಚಿಕಿತ್ಸೆ ಕೊಡುವ ಪೂರ್ವ ವೈದ್ಯರು ಪ್ರೀತಮ್ ಗೆ ಗಾಯಗಳು ಹೇಗೆ ಆಯಿತು ಎಂದು ಹೇಳಿರುತ್ತಾರೆ. ಗಾಯಗಳು ಆದ ಕಾರಣವನ್ನು ವೈದ್ಯರಿಗೆ ತಿಳಿಸಿದ್ದೇನೆ. ವೈದ್ಯರು ಯಾವ ಕಾರಣಕ್ಕೆ ಪ್ರೀತಮ್ ಗೆ ಗಾಯಗಳು ಆಗಿದ್ದಾವೆ ಎಂದು ನಮೂದು ಮಾಡಿದ್ದಾರೆ. ಸರ್ಕಾರೀ ಆಸ್ಪತ್ರೆ ಪುತ್ತೂರಿಗೆ ಪ್ರೀತಮನನ್ನು ಕರೆದುಕೊಂಡು ಹೋಗಿ ಪ್ರಾಥಮಿಕ ಚಿಕಿತ್ಸೆ ಕೊಡಿಸಿದ ಬಗ್ಗೆ ನಮ್ಮಲ್ಲಿ ದಾಖಲೆ ಇಲ್ಲ. ನಂತರ ಮಂಗಳೂರಿನ ಫಸ್ಟ್ ನ್ಯೂರೋ ಆಸ್ಪತ್ರೆಗೆ ಪ್ರೀತಮ್ ನನ್ನು ಕರೆದುಕೊಂಡು ಹೋಗಿ ಚಿಕಿತ್ಸೆ ಕೊಡಿಸಲಾಗಿದೆ. ಅಲ್ಲಿ ಆತನಿಗೆ ಸರಿಯಾದ ಚಿಕಿತ್ಸೆ

ಕೊಟ್ಟಿದ್ದಾರೆ. ಫಸ್ಟ್ ನ್ಯೂರೋ ಆಸ್ಪತ್ರೆಗೆ ಹೋಗಿ ಬರಲು ತೊಂದರೆಯಾಗುತ್ತಿದ್ದ ಕಾರಣ ಅಲ್ಲಿಂದ ಪ್ರೀತಮನನ್ನು ಬಿಡುಗಡೆ ಮಾಡಿಸಿಕೊಂಡು ಪುತ್ತೂರಿನ ಮಹಾವೀರ ಆಸ್ಪತ್ರೆಗೆ ಚಿಕಿತ್ಸೆಗಾಗಿ ತೋರಿಸಲಾಯಿತು. ಮಹಾವೀರ ಆಸ್ಪತ್ರೆಗೆ ಪ್ರೀತಮನನ್ನು ದಾಖಲು ಮಾಡಿದ ಸಮಯದಲ್ಲಿ ಆತನಿಗೆ ಆದ ಗಾಯಗಳು ಅಪಘಾತದಿಂದ ಆಗಿವೆ ಎಂದು ಮಾಹಿತಿ ನೀಡಿದ್ದೇವೆ. ಮಹಾವೀರ ಆಸ್ಪತ್ರೆಗೆ ಪ್ರೀತಮನನ್ನು ದಾಖಲು ಮಾಡಿದ ನಂತರ ಪೊಲೀಸ್ ಠಾಣೆಯಲ್ಲಿ ಅಪಘಾತ ಸಂಬಂಧಿತವಾಗಿ ದೂರು ದಾಖಲು ಮಾಡಲಾಗಿದೆ.

ನನ್ನ ಮಗ ಪ್ರೀತಮ್ ತಾನೇ ಬಿದ್ದು ಗಾಯ ಮಾಡಿಕೊಂಡಿದ್ದು ನಾನು ಹೇಳುತ್ತಿರುವಂತೆ ಇನ್ನೊಂದು ವಾಹನ ಆತನಿಗೆ ಡಿಕ್ಕಿಪಡಿಸಿದ ಕಾರಣ ಆತನಿಗೆ ಗಾಯಗಳು ಆಗಿಲ್ಲ ಎಂದರೆ ಸರಿಯಲ್ಲ. ನಂತರದಲ್ಲಿ ನನ್ನ ಸ್ನೇಹಿತ ಚೇತನ್ ಗೌಡ ರವರ ಬೈಕನ್ನು ಅಪಘಾತ ಪ್ರಕರಣದಲ್ಲಿ ಸೇರಿಸಿ ದೂರು ಕೋಡಲಾಯಿತು ಎಂದರೆ ಸರಿಯಲ್ಲ. ನಾನು ಹೇಳಿದಂತಹ ಯಾವುದೇ ಅಪಘಾತ ಪ್ರೀತಮ್ ಗೆ ಆಗಿಲ್ಲ ಎಂದರೆ ಸರಿಯಲ್ಲ. ಅಪಘಾತವಾದ ಸ್ಥಳವನ್ನು ನಾನು ಮತ್ತು ನನ್ನ ಹೆಂಡತಿ ಪೋಲೀಸರಿಗ ತೋರಿಸಿದ್ದೇವೆ. ನಮ್ಮ ಜೊತೆ ಆ ದಿನ ನಮ್ಮ ಪಕ್ಕದ ಮನೆಯವರು ಕೂಡಾ ಬಂದಿದ್ದರು. ಅಲ್ಲಿ ಬಂದಿದ್ದ ನಮ್ಮ ಪಕ್ಕದ ಮನೆಯವರು ಅಪಘಾತದ ಪ್ರತ್ಯಕ್ಷ ಸಾಕ್ಷಿದಾರರಲ್ಲ. ಮಹಜರು ಮಾಡುವ ಸಮಯದಲ್ಲಿ ಅಪಘಾತ ಸ್ಥಳದಲ್ಲಿ ವಾಹನ ಇತ್ತು. ಅಪಘಾತಪಡಿಸಿದ ವಾಹನ ಪೊಲೀಸ್ ಠಾಣೆಯಲ್ಲಿ ಇತ್ತು. ಅದನ್ನು ಅವರು ಮರುದಿನ ತೆಗೆದುಕೊಂಡು ಹೋಗಿದ್ದಾರೆ.

ಅಪಘಾತ ಕಾಲದಲ್ಲಿ ನಾವು ಪ್ರೀತಮ್ ನನ್ನು ಕರೆದುಕೊಂಡು ಕಾರಿನಲ್ಲಿ ಪುತ್ತೂರಿನಿಂದ ಬಲ್ನಾಡಿಗೆ ಹೋಗುತ್ತಿದ್ದೆವು.

ಅಪಘಾತವಾದ ಸ್ಥಳದಲ್ಲಿ ರಸ್ತೆ 12 ಅಡಿ ಅಗಲ ಇತ್ತು. ನ್ನ ಮಗನನ್ನು ಕಾರಿನಿಂದ ರಸ್ತೆಯ ಎಡಬದಿಯಲ್ಲಿ ಇಳಿಸಿದ್ದೆವು. ಪುತ್ತೂರಿನಿಂದ ಬಲ್ನಾಡಿಗೆ ಹೋಗಿ

ತಿರುಗಿ ಪುತ್ತೂರಿಗೆ ಬರುವಾಗ ರಸ್ತೆಯ ಎಡಬದಿಯಲ್ಲಿ ಕಾರನ್ನು ಪಾರ್ಕ್ ಮಾಡಿದ್ದೇವೆ. ನನ್ನ ಮಗ ರಸ್ತೆ ಕ್ರಾಸ್ ಮಾಡಿ ಉಳ್ಳಾಲ್ತಿ ಸ್ಟೋರ್ ಗೆ ಹೋಗಬೇಕಾಗಿತ್ತು. ರಸ್ತೆ ಕ್ರಾಸ್ ಮಾಡಿ ಮುಕ್ಕಾಲು ರಸ್ತೆ ಕ್ರಮಿಸಿದಾಗ ಅಪಘಾತವಾಗಿದೆ. ಅಪಘಾತಪಡಿಸಿದ ಬೈಕು ಪುತ್ತೂರಿನಿಂದ ಬಂತು. ಬೈಕು ನಮ್ಮ ಕಾರಿನ ಮುಂದಿನಿಂದ ಬಂತು. ನಮ್ಮ ಕಾರು ಪುತ್ತೂರಿನ ಕಡೆ ಮುಖಮಾಡಿ ನಿಂತಿತ್ತು. ನಾನು ಹೇಳಿದಂತೆ ಪುತ್ತೂರಿನಿಂದ ನಾನು ಬಲ್ನಾಡಿಗೆ ಹೋಗಿ ತಿರುಗಿ ಪುತ್ತೂರಿಗೆ ಬರುವಾಗ ಅಪಘಾತ ಆಗಿಲ್ಲ ಎಂದರೆ ಸರಿಯಲ್ಲ. ನನ್ನ ಮುಖ್ಯ ವಿಚಾರಣೆಯಲ್ಲಿ ನಾನು ಮೇಲೆ ತಿಳಿಸಿದಂತೆ ಪುತ್ತೂರಿನಿಂದ ಬಲ್ನಾಡಿಗೆ ಹೋಗಿ ತಿರುಗಿ ಪುತ್ತೂರಿಗೆ ಬರುವಾಗ ನನ್ನ ಮಗ ಪ್ರೀತಮ್ ಅಂಗಡಿಗೆ ಹೋಗಲು ರಸ್ತೆ ಕ್ರಾಸ್ ಮಾಡುವಾಗ ಪುತ್ತೂರಿನಿಂದ ಬಂದ ಬೈಕ್ ಆತನಿಗೆ ಅಪಘಾತಪಡಿಸಿತು ಎಂದು ಹೇಳಿಲ್ಲ ಎಂದರೆ ಸರಿಯಲ್ಲ.

ಮಹಾವೀರ ಆಸ್ಪತ್ರೆಯ ವೈದ್ಯರನ್ನು ಶಾಮೀಲು ಮಾಡಿಕೊಂಡು ಸುಳ್ಳು ದಾಖಲೆಗಳನ್ನು ಸೃಷ್ಟಿಸಿ ಹಾಜರುಪಡಿಸಿದ್ದೇನೆ ಎಂದರೆ ಸರಿಯಲ್ಲ. ನನ್ನ ವಾಕ್ಯ ಪ್ರಮಾಣಪತ್ರದಲ್ಲಿ ನಮೂದಿಸಿರುವ ವೈದ್ಯರು ಹಾಗೂ ಶಸ್ತ್ರಚಿಕಿತ್ಸಾ ತಜ್ಞರುಗಳು ನನ್ನ ಮಗನಿಗೆ ಏನೆಲ್ಲಾ ಚಿಕಿತ್ಸೆ ಕೊಟ್ಟಿದ್ದಾರೆ ಎಂದು ಹೇಳಲು ನ್ಯಾಯಾಲಯಕ್ಕೆ ಹಾಜರುಪಡಿಸಿದ ದಾಖಲೆಗಳನ್ನು ಹೊರತುಪಡಿಸಿ ಬೇರೆ ಯಾವುದೇ ದಾಖಲೆಗಳು ಇಲ್ಲ. 2 ನೇ ಸಲ ಮಹಾವೀರ ಆಸ್ಪತ್ರೆಗೆ ಚಿಕಿತ್ಸೆಗೆ ಹೋದಾಗ ವೈದ್ಯರು ನನ್ನ ಮಗನ ಮೂಳೆ ಕೂಡಿಕೊಂಡಿದೆ ಎಂದು ತಿಳಿಸಿದ್ದಾರೆಂದರೆ ಸರಿ. ನಿಪಿ-14 ಬಿಲ್ಲುಗಳನ್ನು ಈ ಕೇಸಿನ ಸಲುವಾಗಿ ಸೃಷ್ಟಿಸಿ ಹಾಜರುಪಡಿಸಲಾಗಿದ್ದು ಆ ಬಿಲ್ಲುಗಳಿಗೂ ಮತ್ತು ನನ್ನ ಮಗನಿಗೆ ಆದ ಗಾಯಗಳಿಗೂ ಯಾವುದೇ ಸಂಬಂಧ ಇಲ್ಲ ಎಂದರೆ ಸರಿಯಲ್ಲ. ಕೊನೆಯ ಬಾರಿ ಸುಮಾರು 4-5 ತಿಂಗಳ ಹಿಂದೆ ನನ್ನ ಮಗನನ್ನು ಕರೆದುಕೊಂಡು ಆತನಿಗೆ ನಡೆಯಲು ಸಾಧ್ಯವಾಗುತ್ತಿಲ್ಲದಿದ್ದ ಕಾರಣ ಚಿಕಿತ್ಸೆಗಾಗಿ ಆಸ್ಪತ್ರೆಗೆ

ಕರೆದುಕೊಂಡು ಹೋಗಿದ್ದೇನೆ. ನನ್ನ ಮಗನ ಎಡಕಾಲಿನಲ್ಲಿ ನಡೆಯಲು ಕಷ್ಟವಾಗುತ್ತಿತ್ತು. ನನ್ನ ಮಗನ ಎಡಕೈಗೆ ಫ್ರಾಕ್ಚರ್ ಆಗಿರಬಹುದು. ವೈದ್ಯರ ಜೊತೆ ಶಾಮೀಲಾಗಿ ನಿಪಿ-17 ದಾಖಲೆಯನ್ನು ಸೃಷ್ಟಿಸಿ ಹಾಜರುಪಡಿಸಲಾಗಿದೆ ಎಂದರೆ ಸರಿಯಲ್ಲ. ಕೈಗೆ ಸಂಬಂಧಿಸಿದಂತೆ ನನ್ನ ಮಗನಿಗೆ ಯಾವುದೇ ಶಸ್ತ್ರಚಿಕಿತ್ಸೆಯನ್ನು ಮಾಡಿಲ್ಲ.

ಮರುವಿಚಾರಣೆ ಇಲ್ಲ.

ನನ್ನ ಉಕ್ತಲೇಖನದ ರೀತ್ಯ ಬಹಿರಂಗ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಲಾಯಿತು.

ಓ.ಹೇ.ಕೇ.ಸ.ಇದೆ

ಹೆಚ್ಚುವರಿ ಹಿರಿಯ ವ್ಯವಹಾರಿಕ ನ್ಯಾಯಾಧೀಶರು
ಮತ್ತು ಪ್ರಥಮ ದರ್ಜೆ ನ್ಯಾಯಿಕದಂಡಾಧಿಕಾರಿ, ಪುತ್ತೂರು